

# ತೇಗದ ಸಿರಿ ಬೆಳಕಿನಲ್ಲಿ..

ಕೇರಳದ ನಿಲಂಬೂರು, ಟೀಕ್ ಮರಗಳಿಗೆ ಸುಪ್ರಸಿದ್ಧಿ. ಇಲ್ಲಿಯ 1500 ಎಕರೆ ಕಾಡಿನೊಳಗೆ, ಐದೂವರೆ ಎಕರೆ ಪ್ರದೇಶದಲ್ಲಿ ಸಂರಕ್ಷಿತ ಕನೊಲ್ಲಿ ಪ್ಲಾಟ್ ಇದೆ. ಅಲ್ಲಿ ಜತನದಿಂದ ಬೆಳೆಸಿರುವ 172 ವರ್ಷ ವಯಸ್ಸಿನ, ಒಟ್ಟು 115 ಬೃಹತ್ ಗಾತ್ರದ ತೇಗದ ಮರಗಳನ್ನು ನೋಡುವುದೇ ಒಂದು ಸೋಜಿಗ. ಇದು ಜಗತ್ತಿನ ಅತ್ಯಂತ ಪುರಾತನ ಮಾನವ ನಿರ್ಮಿತ ಟೀಕ್ ಪ್ಲಾಂಟೇಶನ್.

■ ಬಿ.ಎಂ.ಹನೀಫ್



172 ವರ್ಷದ ಅತ್ಯಂತ ದೊಡ್ಡ ಮರ– ಟ್ರೀ ನಂಬರ್ 23

ಮೈಸೂರಿನಿಂದ ಹೊರಟು ಬಂಡೀಪುರ ದಾಟಿ ಹಾಗೆಯೇ ಮುಂದಕ್ಕೆ ಸಾಗಿದಾಗ ತೆಪ್ಪಕಾಡು ಸಿಗುತ್ತದೆ. ಅಲ್ಲೇ ಇರೋದು ಕರ್ನಾಟಕ– ತಮಿಳ್ನಾಡು ಅರಣ್ಯ ಗಡಿಯ ಚೆಕ್‌ಪೋಸ್ಟ್. ಇತ್ತ ಬಂಡೀಪುರ ಅರಣ್ಯವಾದರೆ, ಅತ್ತ ಮುದುಮಲೈ ಅರಣ್ಯ. ಅದನ್ನು ದಾಟಿದಾಕ್ಷಣ ಸಿಗುವ ಸಣ್ಣ ಸೇತುವೆ. ಎಡಕ್ಕೆ ತಿರುಗಿದರೆ  ಊಟಿಗೆ ಹೋಗುವ ಶಾರ್ಟ್‌ಕಟ್ ಘಾಟಿ ರಸ್ತೆ. ನೇರ ಹೋದರೂ ಊಟಿಗೆ ಹೋಗಬಹುದು. ದೊಡ್ಡ ಬಸ್‌ಗಳು ಈ ನೇರದಾರಿಯಲ್ಲೇ ಊಟಿಗೆ ಹೋಗುತ್ತವೆ. ನಮ್ಮ ಗುರಿ ಊಟಿ ಆಗಿರಲಿಲ್ಲ. ಮುಂದಕ್ಕೆ ಸಾಗಿದರೆ ಸಿಗುವ ಗುಡಲೂರು ದಾಟಿ ನಾವು ಬಲಕ್ಕೆ ಹೊರಳಿದೆವು. ಅಲ್ಲಿಂದ ನಡುಗಾನಿ, ವಳಿಕ್ಕಡವು, ಎಡಕ್ಕರ, ಚುಂಗತ್ತಾರ. ಈ ಮಧ್ಯೆ ದೊಡ್ಡದೊಂದು ಘಾಟಿ ಹತ್ತಿ ಇಳಿದರೆ ಸಿಗುವುದೇ ನಿಲಂಬೂರು. ನಡುಗಾನಿ ದಾಟಿದಾಗಲೇ ನಾವು ತಮಿಳ್ನಾಡಿನಿಂದ ಕೇರಳಕ್ಕೆ ಕಾಲಿಟ್ಟಿದ್ದೆವು.

ಸಣ್ಣದೊಂದು ಮುಂಗಾರುಪೂರ್ವ ಮಳೆ ಘಾಟಿ ರಸ್ತೆಯಲ್ಲಿ ನಮ್ಮನ್ನು ಸ್ವಾಗತಿಸಿತು. ಏಪ್ರಿಲ್‌ನ ಆ ಬಿರುಬಿಸಿಲಿನಲ್ಲೂ ಆಗಾಗ್ಗೆ ಮಳೆ, ಅಲ್ಲಲ್ಲಿ ಬಿಸಿಲು.

ಪ್ರತಿಯೊಂದು ಊರಿಗೂ ಒಂದೊಂದು ಐಡೆಂಟಿಟಿ ಇರುತ್ತದೆ. ಹಾಗೆಯೇ ನಿಲಂಬೂರು ಎಂದರೆ ಟೀಕ್.  ನಿಲಂಬೂರು ಟೀಕ್ ಎಂದರೆ ಯಾರ ಕಣ್ಣಲ್ಲೇ ಆದರೂ ಮಿಂಚೊಂದು ಹೊಳೆಯುತ್ತದೆ. ಈ ತೇಗದ ಮರದ ಬ್ರ್ಯಾಂಡ್ ಅಷ್ಟೊಂದು ಜನಪ್ರಿಯ. ಕೇರಳದಲ್ಲಿ ಮಾತ್ರವಲ್ಲ, ದಕ್ಷಿಣದ ಎಲ್ಲ ರಾಜ್ಯಗಳಲ್ಲೂ!

ನಿಲಂಬೂರಿಗೆ ಬರುವ ಪ್ರವಾಸಿಗರನ್ನು ಇಲ್ಲಿರುವ ಸಹಸ್ರಾರು ತೇಗದ ಮರಗಳು ಸ್ವಾಗತಿಸುತ್ತವೆ. ಜಗತ್ತಿನಲ್ಲೇ ಮೊತ್ತಮೊದಲ ಮಾನವ ನಿರ್ಮಿತ ತೇಗದ ಪ್ಲಾಂಟೇಷನ್ ಇಲ್ಲಿದೆ. 1500 ಎಕರೆಗೂ ವಿಸ್ತಾರದಲ್ಲಿ ಹರಡಿರುವ ಇಲ್ಲಿಯ ಸಂರಕ್ಷಿತ ಕಾಡನ್ನು ನೋಡುವುದೇ ಕಣ್ಣಿಗೊಂದು ಹಬ್ಬ.